ಪಿ. ಡಬ್ಲೂ-**1**

ದಿನಾಂಕ:**10.03.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**<u>ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ಶ್ರೀ K.C.B ವಕೀಲರಿಂದಃ</u>**

ನಿಮ್ಮ ತಂದೆ ಯಾವ ಯಾವ ವ್ಯಕ್ತಿಗಳ ಮೇಲೆ ದಾವೆ ಹೂಡಿದ್ದರು ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಮಲ್ಲಪ್ಪ ರವರ ಮೇಲೆ ಹೂಡಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ತಂದೆ ಮೃತಪಟ್ಟ ನಂತರ 2 ನೇ ಪ್ರತಿವಾದಿಯ ವಾರಸುದಾರರನ್ನು ದಾವೆಯಲ್ಲಿ ಪಕ್ಷಗಾರರಾಗಿ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಮೂಲತಃ ಕಾಳಾಚಾರಿ ರವರಿಗೆ ಸೇರಿದ್ದು. ಕಾಳಾಚಾರಿ ರವರ ತಂದೆ ಹೆಸರು ನಂಜಚಾರಿ. ನಂಜಾಚಾರಿ ರವರ ತಂದೆ ಹೆಸರು ನನಗೆ ಗೊತ್ತಿಲ್ಲ. ನಂಜಾಚಾರಿಗೆ ದಾವಾ ಆಸ್ತಿ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ನಂಜಾಚಾರಿ ರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ನಂಜಾಚಾರಿ ರವರ ಮಕ್ಕಳ ನಡುವೆ ವಿಭಾಗವಾದ ವಿಚಾರ ನನಗೆ ಗೊತ್ತಿಲ್ಲ. ನಂಜಾಚಾರಿ ರವರ ಮಕ್ಕಳ ನಡುವೆ ವಿಭಾಗ ಆಗಿತ್ತೋ ಅಥವಾ ಇಲ್ಲವೋ ಎಂಬ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು ವಕೀಲರಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

ಸೋಮಣ್ಣ ಬಿನ್ ಬೋಗಯ್ಯ ಎಂದರೆ ನನ್ನ ತಂದೆ. ಸದರಿಯವರು ಕಲ್ಲಹಳ್ಳಿ ಗ್ರಾಮದ ವಾಸಿ ಎಂದರೆ ಸರಿ. ನಿಮ್ಮ ತಂದೆ ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ 1 ನೇ ಪ್ರತಿವಾದಿಯ ವಿರುದ್ಧ ಪ್ರಕರಣ ಹೂಡಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀನೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ಜಮೀನನ್ನು ಕ್ರಯಕ್ಕೆ ಪಡೆದ ದಾಖಲಾತಿಯನ್ನು ನಿಪಿ-3 ರಂತೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದರೆ ಸರಿ. ಸದರಿ ಕ್ರಯ ಪತ್ರವನ್ನು ಬೋಗಾಚಾರಿ ರವರ ಮಕ್ಕಳಿಂದ ಖರೀದಿಸಿರುತ್ತಾರೆಂದರೆ ಸರಿ. ಸಾಕ್ಷಿ ಮುಂದುವರೆದು ಅದು ಸೃಷ್ಟಿಸಿಕೊಂಡಿರುವ ದಾಖಲೆ ಎಂದು ನುಡಿಯುತ್ತಾರೆ. ನಿಪಿ-3 ನ್ನು ಬೋಗಾಚಾರಿ ರವರ ಎಲ್ಲಾ ಮಕ್ಕಳು ಸೇರಿ 1 ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯಪತ್ರ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಸೃಷ್ಟಿಸಿಕೊಂಡಿರುವ ದಾಖಲೆ ಎಂದು ನುಡಿಯುತ್ತಾರೆ. ನಿಪಿ-3 ನ್ನು ಬರೆದುಕೊಟ್ಟಿರುವ

ವ್ಯಕ್ತಿಗಳು ಬೋಗಾಚಾರಿ ರವರ ಕಾನೂನುಬದ್ಧ ವಾರಸುದಾರರು ಎಂದರೆ ನನಗೆ ಗೊತ್ತಿಲ್ಲ. ಸದರಿ ವ್ಯಕ್ತಿಗಳು ಕಲ್ಲಹಳ್ಳಿ ಗ್ರಾಮದ ವಾಸಿಗಳು ಎಂದರೆ ಸರಿ.

2 ರಿಂದ 7 ನೇ ಪ್ರತಿವಾದಿಗಳು ಬೋಗಾಚಾರಿ ರವರ ಕಾನೂನುಬದ್ಧ ವಾರಸುದಾರರು, ಆದಕಾರಣ ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುತ್ತೇನೆಂದರೆ ಸಾಕ್ಷಿ ನಮ್ಮ ತಂದೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಾವೆಯನ್ನು ನನ್ನ ತಂದೆ ಹೂಡಿದ್ದು, ಅವರು ಮೃತಪಟ್ಟ ನಂತರ ನಾನು ಮುಂದುವರಿಸಿಕೊಂಡು ಹೋಗುತ್ತಿದ್ದೇನೆಂದರೆ ಸರಿ. ನಿಪಿ-1 ನ್ನು ಬೋಗಾಚಾರಿ ರವರ ಎಲ್ಲ ವಾರಸುದಾರರು ಬರೆದುಕೊಟ್ಟಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. 3 ಮತ್ತು 6 ನೇ ಪ್ರತಿವಾದಿಗಳ ನಡುವೆ ಅವರ ತಂದೆಯಿಂದ ವಿಭಾಗ ಆಗಿತ್ತೆಂದು ತೋರಿಸಲು ದಾಖಲಾತಿ ಹಾಜರುಪಡಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. 3 ಮತ್ತು 6 ನೇ ಪ್ರತಿವಾದಿ ರವರಿಗೆ ನಿಪಿ-1 ನ್ನು ಬರೆದುಕೊಡುವ ಹಕ್ಕು ಇರಲಿಲ್ಲ ಎಂದರೆ ಸಾಕ್ಷಿ ಹಕ್ಕು ಇತ್ತು ಎಂದು ನುಡಿಯುತ್ತಾರೆ. ಯಾವ ದಾಖಲೆಯ ಆಧಾರದ ಮೇಲೆ ನಿಪಿ-1 ನ್ನು ಬರೆಸಿಕೊಂಡಿರುತ್ತಾರೆಂದರೆ ಸಾಕ್ಷಿ ಕ್ರಯದ ಕರಾರು ಆಗಿತ್ತು ಎಂದು ನುಡಿಯುತ್ತಾರೆ. ಕ್ರಯದ ಕರಾರನ್ನು ಯಾವ ಆಧಾರದ ಮೇಲೆ ಮಾಡಿಕೊಟ್ಟರು ಎಂದರೆ ಸಾಕ್ಷಿ ಅವರು ಮಾಲೀಕರಾಗಿದ್ದರು, ಸದರಿ ಆಧಾರದ ಮೇಲೆ ಎಂದು ನುಡಿಯುತ್ತಾರೆ. 3 ಮತ್ತು 6 ನೇ ಪ್ರತಿವಾದಿಗಳು ಮಾಲೀಕರಾಗಿದ್ದರು ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಏನು ದಾಖಲಾತಿ ನೀಡಿದ್ದೀರಾ ಎಂದರೆ ಸಾಕ್ಷಿ ಪಹಣಿ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಯಾವುದೇ ದಾಖಲೆಯ ಮೇಲೆ ಆಧಾರದ ಮೇಲೆ ನಿಪಿ-1 ಮತ್ತು 3 ನ್ನು ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

3 ಮತ್ತು 6 ನೇ ಪ್ರತಿವಾದಿಗಳಿಗೆ ಮಾಲೀಕತ್ವ, ಹಕ್ಕು ಇರುವ ಬಗ್ಗೆ ದಾಖಲಾತಿಯೂ ಇಲ್ಲ, ಸದರಿಯವರು ಮಾಲೀಕರು ಅಲ್ಲ ಎಂದರೆ ಸರಿಯಲ್ಲ. 3 ಮತ್ತು 6 ನೇ ಪ್ರತಿವಾದಿಗಳು ನಿಮಗೆ ಯಾವುದೇ ಕ್ರಯದ ಕರಾರು ಬರೆದುಕೊಟ್ಟಿರುವುದಿಲ್ಲ, ಅದನ್ನು ಸೃಷ್ಟಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಸದರಿ ಕ್ರಯದ ಕರಾರು ಪತ್ರವನ್ನು ದಿಃ 09.04.2002 ರಲ್ಲಿ ಬರೆದುಕೊಟ್ಟಿರುತ್ತಾರೆ. ಸದರಿ ಪತ್ರವನ್ನು ರಾಮಚಂದ್ರಯ್ಯ ರವರು

ಬರೆದಿರುತ್ತಾರೆ. ಸದರಿ ಪತ್ರವನ್ನು ಬರೆದುಕೊಟ್ಟರು ಎಂದು ಸಾಕ್ಷಿ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಯಾರು ಬರುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಸೃಷ್ಟಿಸಿಕೊಂಡಿರುವ ದಾಖಲೆಯಾದ ಕಾರಣ ಯಾವುದೇ ಸಾಕ್ಷಿ ಪಟ್ಟಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಾಕ್ಷಿದಾರರು ಭಯಗೊಂಡು ಬರುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಬಗ್ಗೆ ಪೊಲೀಸ್ ಠಾಣೆಗೆ ದೂರು ನೀಡಿರುವುದಿಲ್ಲ.

ನಿಪಿ-1 ನ್ನು ರಾಮಚಂದ್ರಯ್ಯ ನವರೇ ಬರೆದಿರುತ್ತಾರೆ. ಸಾಕ್ಷಿದಾರರು ಯಾರು ಎಂದು ಗೊತ್ತಿಲ್ಲ. ನಿಪಿ-1 ಮತ್ತು 3 ನ್ನು ಈ ದಾವೆಗೊಸ್ಕರ ಸೃಷ್ಟಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಸ್ವಾಧೀನ ಇರುವ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ವಕೀಲರಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ನೀವು ಎಂದಿಗೂ ಸ್ವಾಧೀನದಲ್ಲಿ ಇರುವುದಿಲ್ಲ ಹಾಗೂ ಮಾಲೀಕರು ಅಲ್ಲ ಎಂದರೆ ಸರಿಯಲ್ಲ. ದಾವೆ ಹೂಡುವ ಪೂರ್ವದಲ್ಲಿ ಹಾಗೂ ದಾವೆ ಹೂಡಿದ ನಂತರವೂ ದಾವಾ ಆಸ್ತಿ 1 ನೇ ಪ್ರತಿವಾದಿಯ ಸ್ವಾಧೀನದಲ್ಲೇ ಇರುವುದು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಪಡೆದಿರುವ ಕ್ರಯ ಪತ್ರ ಕಾನೂನುಬದ್ಧ ಕ್ರಯಪತ್ರ, ಬೋಗಾಚಾರಿ ರವರ ಕಾನೂನುಬದ್ಧ ವಾರಸುದಾರರು ಬರೆದುಕೊಟ್ಟಿರುವ ಕ್ರಯಪತ್ರ ಎಂದರೆ ಸುಳ್ಳು. ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಯಿಂದ ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.